ಸಾವಕಾಶವಾಗಿ ಕಾರಿನ ಕಡೆಗೆ ಹೆಜ್ಜೆಹಾಕಿದರು. ಮಧ್ಯದಲ್ಲಿ ನಿಂತು ಆಕಾಶದ ಕಡೆಗೊಮ್ಮೆ ದಿಟ್ಟಿಸಿನೋಡುತ್ತಾ, 'ಸಿಕ್ಕಾಪಟ್ಟೆ ಮಂಜು ಬೀಳುತ್ತಿದೆ!' ಹೆಂಡತಿಯ ಪಕ್ಕದಲ್ಲಿ ಆಸೀನರಾಗುತ್ತಾ ಮಿಸ್ಟರ್ ಫೋಸ್ಟರ್ ಉದ್ಗರಿಸಿದರು. 'ಸಾಮಾನ್ಯವಾಗಿ ಇಲ್ಲಿಗಿಂತ ವಿಮಾನ ನಿಲ್ದಾಣದಲ್ಲಿ ಹೆಚ್ಚು ಮಂಜು ಬೀಳುತ್ತಿರುತ್ತದೆ. ನಿನ್ನ ಫ್ಲೈಟ್ ಇಷ್ಟರಲ್ಲೇ ರದ್ದಾಗಿರಬಹುದೇನೋ?!'

'ಹಾಗೆನ್ನಬೇಡಿ ಡಿಯರ್... ಪ್ಲೀಸ್...' ಅವಳು ಬಿಕ್ಕಳಿಸಿದಳು.

ನದಿಯ ಮೇಲಿನ ಸೇತುವೆಯನ್ನು ದಾಟುವವರೆಗೆ ಅವರು ಮತ್ತೆ ಮಾತನಾಡಲಿಲ್ಲ.

'ಕೆಲಸಗಾರರ ಬಗ್ಗೆ ನಾನೆಲ್ಲಾ ವ್ಯವಸ್ಥೆ ಮಾಡಿದ್ದೇನೆ ಡಾರ್ಲಿಂಗ್. ಇವತ್ತು ಎಲ್ಲರಿಗೂ ರಜೆ ಕೊಟ್ಟಿದ್ದೇನೆ. ನಾಳೆಯಿಂದ ಆರು ವಾರಗಳವರೆಗೆ ಅರ್ಧ ಸಂಬಳವೆಂದು ಮಾತನಾಡಿದ್ದೇನೆ. ನೀನು ಬಂದ ತಕ್ಷಣ ವಾಕರ್‌ಗೆ ಟೆಲಿಗ್ರಾಂ ಮಾಡಿ ತಿಳಿಸುತ್ತೇನೆಂದು ಹೇಳಿದ್ದೇನೆ.'

'ವಾಕರ್ ನನಗೆ ತಿಳಿಸಿದ.'

'ಇವತ್ತು ಸಂಜೆಯಿಂದ ಒಂದು ಸಣ್ಣ ಬದಲಾವಣೆ. ನಾನು ಕ್ಲಬ್ಬಿನಲ್ಲೇ ಉಳಿದುಕೊಳ್ಳುತ್ತೇನೆ.'

'ನಾನು ನಿಮಗೆ ಪ್ರತಿದಿನವೂ ಪತ್ರ ಬರೆಯುತ್ತೇನೆ ಡಿಯರ್.'

'ನಾನು ಮಧ್ಯೆ ಮಧ್ಯೆ ಮನೆಗೆ ಹೋಗುತ್ತಿರುತ್ತೇನೆ. ನಿನ್ನ ಪತ್ರಗಳನ್ನೂ ಓದಿದಂತಾಗುತ್ತದೆ.'

'ವಾಕರನಿಗೆ ಮನೆಯಲ್ಲೇ ಇರಿಸಿಕೊಂಡರೆ ಒಳ್ಳೆದೂಂತ ನಿಮಗೆ ಅನಿಸುವುದಿಲ್ಲವೇ?' ಮಿಸೆಸ್ ಫೋಸ್ಟರ್ ಕೇಳಿದಳು.

'ನಾನ್ಸೆನ್ಸ್! ಸುಮ್ಮನೆ ದುಡ್ಡು ಹಾಳು!' ಮಿಸ್ಟರ್ ಫೋಸ್ಟರ್ ಖಾರವಾಗಿಯೇ ಹೇಳಿದರು.

'ನೀವು ಹೇಳುವುದೂ ಸರಿಯೇ.' ಆಕೆಗೆ ಈ ಸಂದರ್ಭದಲ್ಲಿ ವಾದ ಬೆಳೆಸುವುದು ಬೇಕಿರಲಿಲ್ಲ. ಸುಮ್ಮನಾದಳು.

'ಈ ಕೆಲಸದವರೇ ಮನೆಯಲ್ಲಿದ್ದರೆ ಏನೇನು ಮಾಡುತ್ತಾರೋ ಏನೋ?' ಎಂದು ಸಮಜಾಯಿಷಿ ಕೊಡುತ್ತಾ ಮಿಸ್ಟರ್ ಫೋಸ್ಟರ್ ಸಿಗಾರನ್ನು ಹೊರತೆಗೆದರು. ಬೆಳ್ಳಿಯ ಕತ್ತರಿಯಿಂದ ಅದರ ತುದಿಯನ್ನು ಕತ್ತರಿಸಿ ಚಿನ್ನದ ಲೈಟರಿನಿಂದ ಹೊತ್ತಿಸಿದರು.

ಆಕೆ ಮಾತನಾಡಲಿಲ್ಲ. ಸ್ವಲ್ಪ ಸಮಯದ ನಂತರ, 'ನನ್ನ ಪತ್ರಗಳಿಗೆ ಉತ್ತರಿಸುತ್ತೀರಾ ತಾನೆ?' ಎಂದು ಕೇಳಿದರು.

'ನನಗೇನೋ ನಂಬಿಕೆಯಿಲ್ಲ! ನಿನಗೇ ಗೊತ್ತಿರುವಂತೆ ಅಗತ್ಯವಿಲ್ಲದೆ ಪತ್ರ ಬರೆಯುವ ಹವ್ಯಾಸ ನನಗೆ ಇಲ್ಲ.'

'ನನಗೆ ಗೊತ್ತು ಡಿಯರ್. ಸುಮ್ಮನೆ ಕೇಳಿದೆ ಅಷ್ಟೆ. ನೀವೇನು ತೊಂದರೆ ತಗೋಬೇಡಿ.'

ಅವರು ಏರ್‌ಪೋರ್ಟ್ ಸಮೀಪಿಸುತ್ತಿದ್ದಂತೆ ಮಂಜು ದಟ್ಟವಾಗಿ, ಕಾರಿನ ವೇಗ ಕಡಿಮೆಯಾಗತೊಡಗಿತು. 'ದೇವರೇ!' ಮಿಸೆಸ್ ಫೋಸ್ಟರ್ ಹೌಹಾರಿದಳು. 'ನಾನು ಸಮಯಕ್ಕೆ ಸರಿಯಾಗಿ ಮುಟ್ಟಿದಂತೆಯೇ!'

'ನಿನ್ನ ಕೊರಗು ಒಮ್ಮೆ ನಿಲ್ಲು ಮಾರಾಯ್ತಿ! ಇಂತ ವಾತಾವರಣದಲ್ಲಿ ವಿಮಾನ ರದ್ದಾಗುವುದೇ ಲೇಸು. ತಲೆಯಲ್ಲಿ ಮಿದುಳಿರುವ ಯಾವನೇ ಪೈಲಟ್ ಈ ಹವಾಮಾನದಲ್ಲಿ ವಿಮಾನ ಹಾರಿಸಲು ತಯಾರಿರುವುದಿಲ್ಲ. ಮೊದಲನೆಯದಾಗಿ ನಾವು ಹೊರಡಲೇ ಬಾರದಿತ್ತು.'

ಮಿಸೆಸ್ ಫೋಸ್ಟರ್ ಅಸ್ವಸ್ಥಳಾದಳು. ಅವನ ದನಿಯಲ್ಲಿನ ಭಾವವನ್ನು ಅಂದಾಜಿಸಲು